ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಗೆ ಅವರನ್ನೂ ಕರೆಸಿ, ಮಂತ್ರಿಗಳನ್ನೂ ಕರೆಸಿ, ಕುಳಿತು ಇದರ ಬಗ್ಗೆ ಚರ್ಚೆ ಮಾಡೋಣ.

ಅಧ್ಯಕ್ಷರು : ರೂಲ್ 69 ರಡಿಯಲ್ಲಿ ಮಂಗಳವಾರ ಚರ್ಚೆಗೆ ಅವಕಾಶ ಕೊಡಲು ಒಪ್ಪಿ ಕೊಂಡಾಗಿದೆ. ದಯವಿಟ್ಟು ಈ ಬಗ್ಗೆ ಈಗಲೇ ಮತ್ತೆ ಮಾತನಾಡದೇ ಎಲ್ಲರೂ ಕುಳಿತುಕೊಳ್ಳಿ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ:– ಹಾಸನ ಮತ್ತು ಶಿವಮೊಗ್ಗದಲ್ಲಿರುವ ಪಶು ವೈದ್ಯಕೀಯ ಕಾಲೇಜುಗಳ ಮಾನ್ಯತೆಯನ್ನು ರದ್ದು ಮಾಡಿರುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) :– ಮಾನ್ಯ ಅಧ್ಯಕ್ಷರೆ, ಮಾನ್ಯ ಪಶುಸಂಗೋಪನಾ ಇಲಾಖಾ ಸಚಿವರು ಇಲ್ಲಿಯೇ ಇದ್ದಾರೆ. ಹಾಸನ ಮತ್ತು ಶಿವಮೊಗ್ಗದಲ್ಲಿರುವ ಪಶುವೈದ್ಯಕೀಯ ಕಾಲೇಜಿನ ಮಾನ್ಯತೆ ರದ್ದು ಮಾಡುವುದಕ್ಕೆ ಈಗಾಗಲೇ Veterinary Council of India ರದ್ದು ಮಾಡಿರುವುದರ ಬಗ್ಗೆ ಹೇಳಿದ್ದಾರೆ. ದಿನಾಂಕ 08–04–2013 ರಲ್ಲಿ ಶಿವಮೊಗ್ಗ ಮತ್ತು ಹಾಸನದ ಎರಡೂ ಕಾಲೇಜಿನ ಮಾನ್ಯತೆ ರದ್ದು ಮಾಡಬೇಕು, ಈ ವರ್ಷದಿಂದ ಅಡ್ಮಿಶನ್ ಮಾಡಬಾರದೆಂದು ಹೇಳಿರುವ ವಿಷಯವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಇನ್ನು ಎರಡನೆಯದಾಗಿ, 391 ಪಶು ವೈದ್ಯಕೀಯ ವೈದ್ಯರ ನೇಮಕಾತಿ ಬಗ್ಗೆ ಪ್ರಕ್ರಿಯೆ ಪ್ರಾರಂಭವಾಗಿದೆ. ಇದರಲ್ಲಿ ಹಾಸನ ಮತ್ತು ಶಿವಮೊಗ್ಗ ಕಾಲೇಜಿನ ವಿದ್ಯಾರ್ಥಿಗಳ ರಿಸಲ್ಟ್ ಕೂಡ ಬಂದಿದ್ದು ಅವರುಗಳು ಹಾಕಿರುವ ಅರ್ಜಿಗಳನ್ನು ತಿರಸ್ಕಾರ ಮಾಡಿದ್ದಾರೆ. ಆ ಕಾಲೇಜ್‌ಗಳಲ್ಲಿ ಪಾಸ್ ಆಗಿರುವಂಥ ವಿದ್ಯಾರ್ಥಿಗಳು ಹಾಕಿರುವ ಅರ್ಜಿಗಳನ್ನು ತಿರಸ್ಕಾರ ಮಾಡಿದ್ದಾರೆ. ಇವತ್ತು ಬೋಧಕರುಗಳು ಅಲ್ಲಿ ಇಲ್ಲ. ಸುಮಾರು 96 ಜನ ಬೋಧಕರುಗಳು, ಬೋಧಕೇತರ ಸಿಬ್ಬಂದಿಗಳು 196 ಜನ, ಹೀಗೆ ಒಟ್ಟು 250 ಜನ ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಗಳಿಲ್ಲವೆಂದು ಮತ್ತು ಕಟ್ಟಡ, ಮೂಲಭೂತ ಸೌಕರ್ಯಗಳಿಲ್ಲವೆಂದು ಹೇಳಿದ್ದಾರೆ. ಶಿವಮೊಗ್ಗದ ಮತ್ತು ಹಾಸನದ ಈ ಕಾಲೇಜ್‌ಗಳು 2007 ರಲ್ಲಿ ಪ್ರಾರಂಭವಾಗಿವೆ. ರಾಜ್ಯದಲ್ಲಿ ಈಗ ಬೀದರ್‌ನಲ್ಲಿ ಒಂದು ಮತ್ತು ಬೆಂಗಳೂರಿನಲ್ಲಿ ಒಂದು ಪಶುವೈದ್ಯಕೀಯ ಕಾಲೇಜಿದೆ. ಹಾಸನ

ಮತ್ತು ಶಿವಮೊಗ್ಗದಲ್ಲಿರುವುದೂ ಸೇರಿ ನಾಲ್ಕು ಕಾಲೇಜ್‌ಗಳಿವೆ. ಕೆಲವು ಕಡೆ ಜಿಲ್ಲಾ ಕೇಂದ್ರಗಳಲ್ಲಿ ಇವತ್ತು ಪಶು ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳೇ ಇಲ್ಲ. ಇನ್ನೂ ನಾಲ್ಕು ಕಾಲೇಜ್ ಸ್ಥಾಪನೆ ಮಾಡಿದರೂ ಡಾಕ್ಟರ್‌ಗಳು ಸಿಗುವುದಿಲ್ಲ. ಕೆಲವು ಕಡೆ ತಮಿಳುನಾಡಿನಿಂದ ಕರೆದುಕೊಂಡು ಬರುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಲವಾರು ಪತ್ರಿಕೆಗಳಲ್ಲಿ ಬಂದಿರುವಂಥದ್ದನ್ನೂ ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ನೀವು ಪ್ರಸ್ತಾಪ ಮಾಡುತ್ತಿರುವ ವಿಚಾರ ಬಹಳ ಪ್ರಮುಖವಾದದ್ದೇ ಆಗಿದೆ. ಇದರ ಬಗ್ಗೆ ವಿಶೇಷವಾಗಿ ಚರ್ಚೆ ಮಾಡುವುದಕ್ಕಾಗಿ ಸೋಮವಾರ ಇದನ್ನು ರೂಲ್ 69 ರಡಿಯಲ್ಲಿ ತೆಗೆದುಕೊಳ್ಳೋಣ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ,,,,

ಶ್ರೀ ಹೆಚ್.ಡಿ.ರೇವಣ್ಣ :– ಒಂದ್ನಿಮಿಷ ಹೇಳಿಬಿಡುತ್ತೇನೆ, ಸಾರ್. ಕಾನೂನು ಮಂತ್ರಿಗಳೆ ಸದಸ್ಯರುಗಳು ಮಾತನಾಡುವಾಗ ನೀವು ಮದ್ಯೆ ಎದ್ದುನಿಂತುಕೊಳ್ಳುವುದನ್ನು ಸ್ವಲ್ಪ ಕೈಬಿಡಬೇಕು. ನೀವು ಹಿರಿಯ ಸದಸ್ಯರಾಗಿರುವುದರಿಂದ ನಾನು ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಸದಸ್ಯರುಗಳು ಮಾತನಾಡಿದ ಮೇಲೆ ನೀವು ಉತ್ತರದಲ್ಲಿ ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ನಾನೇನು ಬೇಡವೆಂದು ಹೇಳುವುದಿಲ್ಲ. ನಿಜ, ಕಾನೂನು ಮಂತ್ರಿಗಳಾದ ತಮಗೆ ಎರಡು ಪೋರ್ಟ್‌ಫೋಲಿಯೋ ಇದೆ. ಕಾನೂನು ಇಲಾಖೆ ಇದೆ. ಮತ್ತೆ ರಾತ್ರಿ ಹೊತ್ತಿನಲ್ಲಿ ಅವರಿವರು ಅರ್ಜಿಗಳನ್ನು ತೆಗೆದುಕೊಂಡು ಬರುತ್ತಾರಲ್ಲಾ ಅದನ್ನೂ ಕೂಡ ನೋಡಬೇಕು, ಆಮೇಲೆ ಪಾರ್ಟಿ ಕಾರ್ಯಕರ್ತರನ್ನೂ ಕೂಡ ನೀವು ನೋಡಬೇಕು.

ಅಧ್ಯಕ್ಷರು :– ನೇರವಾಗಿ ನೀವು ವಿಷಯಕ್ಕೆ ಬನ್ನಿ, ಬೇರೆಯದ್ದೆಲ್ಲ ಹೇಳುವುದು ಬೇಕಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ :– ಅವರ ಗಮನಕ್ಕೆ ತರಬೇಕಲ್ಲ ಮಾನ್ಯ ಅಧ್ಯಕ್ಷರೆ? ಅದಕ್ಕಾಗಿ ಅವರು ಸ್ವಲ್ಪ ತಾಳ್ಮೆಯಿಂದ ಇರಲಿ.

ಅಧ್ಯಕ್ಷರು :– ನೀವು ಮತ್ತೆ ಅಲ್ಲಿಗೇ ಹೋಗುತ್ತೀರಿ.

ಶ್ರೀ ಟಿ.ಬಿ.ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಅವರು ಇನ್ನೂ ಹೊಳೆನರಸೀಪುರವನ್ನು ಬಿಟ್ಟೇ ಇಲ್ಲ, ಇನ್ನೂ ಬೆಂಗಳೂರಿಗೆ ತಲುಪಿಲ್ಲ ರೇವಣ್ಣನವರು.

ಶ್ರೀ ಹೆಚ್.ಡಿ.ರೇವಣ್ಣ :- ಮಾನ್ಯ ಅಧ್ಯಕ್ಷರೆ, ಹೊಳೆನರಸೀಪುರ ಬಿಟ್ಟು ಶಿರಾಕ್ಕೆ ಹೋಗಬೇಕು ಎಂದು ಹೇಳಿದರೆ ನಾನು ಅಲ್ಲಿಗೇ ಹೋಗುತ್ತೇನೆ. ಕಾನೂನು ಮಂತ್ರಿಗಳ ಗಮನಕ್ಕೆ ಬರಲಿ, ಈಗ ಸಭಾನಾಯಕರು ಸದನದಲ್ಲಿ ಇದ್ದಾರೆ, ನೀವೇಕೆ ಎದ್ದು ಎದ್ದು ಕುಣಿಯುತ್ತೀರಿ?

ಅಧ್ಯಕ್ಷರು : ಬೇರೆಯದೆಲ್ಲ ಬೇಡ. ನೀವು ವಿಷಯಕ್ಕೆ ಬನ್ನಿ.

ಶ್ರೀ ಹೆಚ್.ಡಿ.ರೇವಣ್ಣ :- ಮಾನ್ಯ ಅಧ್ಯಕ್ಷರೆ, ಎರಡು ಕಾಲೇಜ್‌ಗಳಿಗೆ ಹಣವನ್ನು ಕೊಡಲಾಗಿದೆ. ಬಿಲ್ಡಿಂಗ್ ಕೆಲಸ ಇವತ್ತಿನವರೆಗೂ ಆಗಿಲ್ಲ. ಇದರ ಜೊತೆಗೆ ಮತ್ತೆ ಬಿಲ್ಡಿಂಗ್‌ಗೆ ಹಣ ಬೇಕಾಗಿದೆ. ಈ ಕಾಲೇಜ್ ಪ್ರಾರಂಭವಾಗಿ ಸುಮಾರು ಆರೇಳು ವರ್ಷವಾಯಿತು. ಇವತ್ತು ಅಲ್ಲಿ ಓದಿರುವ ವಿದ್ಯಾರ್ಥಿಗಳ ಭವಿಷ್ಯ ಏನಾಗಿದೆ ಗೊತ್ತೆ? ಈಗಾಗಲೇ ದಿನಾಂಕ 08-04-2013 ರಲ್ಲಿ ಮಾನ್ಯತೆ ರದ್ದಾದ ಆದೇಶವಾಗಿದೆ, ಈಗಾಗಲೇ ಸುಮಾರು ಎರಡು ತಿಂಗಳಾಗಿದೆ. ಎರಡು ತಿಂಗಳುಗಳಿಂದ ಇವರೇನಾದರೂ ಕೇಂದ್ರ ಸರ್ಕಾರದ ಜೊತೆ ಪತ್ರವ್ಯವಹಾರ ಮಾಡಿದ್ದಾರೆಯೇ? ಏಕೆಂದರೆ ಮೇ 22 ರಿಂದ ಸಿ.ಇ.ಟಿ. ಪರೀಕ್ಷೆಗಳು ಪ್ರಾರಂಭವಾಗಬೇಕಾಗಿತ್ತು. ಈಗ ನಾವು ಜೂನ್ ತಿಂಗಳಿನಲ್ಲಿದ್ದೇವೆ, ಇವತ್ತು ಜೂನ್ 7 ನೇ ತಾರೀಖು ನಡೆಯುತ್ತಿದೆ, ಕಳೆದ ಹದಿನೈದು ದಿವಸಗಳಿಂದ ಆ ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗಿದೆ ಗೊತ್ತೆ? ಅವರಿಗೆ ಸೀಟ್ ಸಿಗುತ್ತದೋ ಇಲ್ಲವೋ ಎನ್ನುವ ಆತಂಕವಿದೆ. ಈಗ ಆ ಎರಡು ಕಾಲೇಜ್ ಬಾಗಿಲುಗಳನ್ನು ಮುಚ್ಚುವ ಆತಂಕ ಬೇರೆ ಇದೆ. ಎರಡನೇ ವರ್ಷ, ಮೂರನೇ ವರ್ಷದ ವಿದ್ಯಾರ್ಥಿಗಳಾಗಿ ಮುಂದುವರಿದಿರುವವರ ಭವಿಷ್ಯ ಏನಾಗುತ್ತದೆ? ಅವರ ತಂದೆ ತಾಯಿಗಳು ರೋಡ್‌ನಲ್ಲೆಲ್ಲಾ ಮುಷ್ಕರ ಮಾಡುತ್ತಿದ್ದಾರೆ. ಅದಕ್ಕಾಗಿ ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಬೇಕಾಗಿದೆ. ಅದಕ್ಕಾಗಿ ಅವಕಾಶ ಮಾಡಿಕೊಡಬೇಕು. ಇವತ್ತೇ ಅನುಮತಿ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ಇದನ್ನು ನೀವು ಯಾವ ರೀತಿ ಪರಿವರ್ತನೆ ಮಾಡುತ್ತೀರೋ ಆ ಪ್ರಕಾರ ಚರ್ಚೆ ಮಾಡಲು ನಾವು ತಯಾರಿದ್ದೇವೆ.

ಅಧ್ಯಕ್ಷರು :– ರೂಲ್ 69 ರಡಿಯಲ್ಲಿ ಇದನ್ನು ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) :– ಮಾನ್ಯ ಅಧ್ಯಕ್ಷರೆ, ಈ ರೀತಿ ಕಾಲೇಜ್‌ಗಳು ಪ್ರಾರಂಭವಾಗಿ ಆರೇಳು ವರ್ಷಗಳಾದ ಮೇಲೆ ಈ ರೀತಿಯ ಆತಂಕ ಪರಿಸ್ಥಿತಿ ಬಂದಿದೆ. ಈಗ ಅವರಿಗೆ ಹೊಸದಾಗಿ ಅಡ್ಮಿಶನ್ ಕೂಡ ಇಲ್ಲ, ಪಾಸ್ ಆದವರಿಗೂ ಬೇರೆ ದಿಕ್ಕಿಲ್ಲ ಎನ್ನುವುದಾದರೆ ಅವರ ಭವಿಷ್ಯ ಏನಾಗಬೇಕು? ಈಗಾಗಲೇ ಹತ್ತಾರು ಕೋಟಿ ರೂ.ಗಳನ್ನು ಖರ್ಚು ಮಾಡಿ ಸಾಕಷ್ಟು ಡೆವಲಪ್‌ಮೆಂಟ್ ಮಾಡಿದ್ದೇವೆ. ಹಾಸನ ಮತ್ತು ಶಿವಮೊಗ್ಗದ ಕಾಲೇಜುಗಳಲ್ಲಿ ಇನ್ನೂ ಸ್ವಲ್ಪ ಡೆವಲಪ್‌ಮೆಂಟ್ ಮಾಡುವುದಕ್ಕೆ ಗಮನ ಕೊಟ್ಟು ಮುಖ್ಯಮಂತ್ರಿಗಳು ಆ ಕಾಲೇಜುಗಳು ಪ್ರಾರಂಭವಾಗುವುದಕ್ಕೆ ಏನು ಒತ್ತಾಯವನ್ನು ತರಬೇಕೋ ಅದನ್ನು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿ ಅವುಗಳಿಗೆ ರೆಕಗ್‌ನಿಶನ್ ಕೊಡಿಸಿ ಆ ಮಕ್ಕಳಿಗೆ ಅನ್ಯಾಯವಾಗುವುದನ್ನು ತಪ್ಪಿಸಬೇಕಲ್ಲವೆ ಸ್ವಾಮಿ? ಇದು ಗುರುತರವಾದಂಥ ಮತ್ತು ಬಹಳ ಪ್ರಮುಖವಾದಂಥ ವಿಷಯವಲ್ಲವೆ? ತಕ್ಷಣ ಇದರ ಬಗ್ಗೆ ಗಮನವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು : ಆ ರೀತಿ ಹೇಳಲೇ ಇಲ್ಲ. ಗುರುತರವಾದ ವಿಷಯವಾಗಿರುವುದರಿಂದಲೇ ರೂಲ್ 69 ರಡಿಯಲ್ಲಿ ಸೋಮವಾರ ತೆಗೆದುಕೊಳ್ಳೋಣ ಎಂದು ಹೇಳಿರುವುದು.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ರೇವಣ್ಣನವರು ಎತ್ತಿರತಕ್ಕಂಥ ಪ್ರಶ್ನೆಯೇ ಬೇರೆ. ಮಾನ್ಯ ಯಡಿಯೂರಪ್ಪನವರು ಎತ್ತಿರತಕ್ಕಂಥ ಪ್ರಶ್ನೆಯೇ ಬೇರೆ. ನಾನು ಒಂದು ಮಾತನ್ನು ಹೇಳುತ್ತೇನೆ. ಈಗಾಗಲೇ ನಾನು ಬಂದ ತಕ್ಷಣ ಸುಮಾರು ಐದಾರು ಸಭೆಗಳನ್ನು ಕರೆದಿದ್ದೇನೆ, ಫೈನಾನ್ಸ್ ಸೆಕ್ರೆಟರಿಯವರನ್ನು ಕರೆದು V.C.I ನವರು objection ಹಾಕಿರುವಂಥದ್ದರ ಬಗ್ಗೆ ನೋಡಿ ಅಲ್ಲಿ infrastructure create ಮಾಡುವುದಕ್ಕೆ ಎಲ್ಲಾ ರೀತಿಯಾದಂಥ ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಇವತ್ತು ಕೇಂದ್ರದ ಕೃಷಿ ಸಚಿವರಿಗೂ ಕೂಡ ಪತ್ರವನ್ನು ಬರೆದು ಒತ್ತಾಯವನ್ನು ಕೂಡ ಮಾಡಿದ್ದೇವೆ.

ಅಧ್ಯಕ್ಷರು :– ನೀವು ಈಗಲೇ ಉತ್ತರ ಕೊಟ್ಟುಬಿಟ್ಟರೆ ಮತ್ತೆ ಸೋಮವಾರ ಇದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಏನಿದೆ?

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಡುವುದಕ್ಕೆ ಈಗ ಹೋಗುತ್ತಿಲ್ಲ. ಇವತ್ತು ಮನೆ ಹತ್ತಿರ ಹೋದರೆ ಅಲ್ಲಿ ಮುನ್ನೂರು ಜನರಿದ್ದಾರೆ, ಆಫೀಸ್ ಹತ್ತಿರ ಒಂದು ಮುನ್ನೂರು ಜನರಿದ್ದಾರೆ, ಏನೋ ಒಂದು ಮೆಸೇಜ್ ಹೋಗುತ್ತದೆ, ಅದು ತಪ್ಪು ಮೆಸೇಜ್ ಹೋಗಿ ಅವರಲ್ಲಿ ತಪ್ಪು ಕಲ್ಪನೆ ಹೋಗುವುದು ಬೇಡ. ನಾನು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಈಗ 391 ಜನರದ್ದು ಆಪ್ಲಿಕೇಶನ್‌ಗಳೇನಿವೆ ಅದರ ಬಗ್ಗೆ ವೆರಿಫಿಕೇಶನ್ ನಡೆಯುತ್ತಿದೆ, ರಿಜೆಕ್ಟ್ ಮಾಡಿಲ್ಲ. ರಿಜೆಕ್ಟ್ ಮಾಡಿದೆ ಎಂದು ತಪ್ಪು ಮಾಹಿತಿ ಹೋಗುವುದು ಬೇಡ. ಇದರ ಬಗ್ಗೆ ಸಮಗ್ರವಾದಂಥ ಉತ್ತರವನ್ನು ಮಾನ್ಯ ಸದಸ್ಯರುಗಳು ಚರ್ಚೆ ಮಾಡಿದ ಮೇಲೆ ನಾನು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ. ನಿಯಮ 69 ರಡಿಯಲ್ಲಿ ಎಂದು ತಾವು ಹೇಳಿದ್ದೀರಿ. ನೀವು ಯಾವತ್ತು ಹೇಳುತ್ತೀರೋ ಅವತ್ತು ಚರ್ಚೆಯಾದ ಮೇಲೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಆಗಲಿ, ಈಗ ಮಾನ್ಯ ಯಡಿಯೂರಪ್ಪನವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕು.

5. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) :– ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಮಾಡಿದಂಥ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲೆ ಆಡಳಿತ ಪಕ್ಷದ ಇಬ್ಬರು ಮತ್ತು ಪ್ರತಿಪಕ್ಷದ ನಾಯಕರು ಈಗಾಗಲೇ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಮುಖ್ಯಮಂತ್ರಿಗಳೂ ಕೂಡ ಈಗ ಈ ಸಭೆಯಲ್ಲಿರುವಂಥದ್ದು ಸ್ವಾಗತಾರ್ಹವಾದ ಸಂಗತಿಯಾಗಿದೆ. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಚುನಾವಣೆ ಫಲಿತಾಂಶದ ಬಗ್ಗೆ ತುಂಬಾ ಅರ್ಥಗರ್ಭಿತವಾದಂಥ ಒಂದು ಕಾರ್ಟೂನ್ ದಿನಾಂಕ 15–05–2013 ರ ಹಿಂದು ಪತ್ರಿಕೆಯಲ್ಲಿ ಬಂದಿದೆ. ಆ ಕಾರ್ಟೂನ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು Thank you Sonia jee, Thank you Rahul jee, Thank you Manmohan jee ಎಂದು ಮುಖ್ಯಮಂತ್ರಿಗಳು ಹೇಳುತ್ತಿರುವಂಥದ್ದು, ಮತ್ತೆ